illicit ಸಾಗಾಣಿಕೆಗೆ ಆಸ್ಪದವಿರಲು ಎಂದು ಈ ರೀತಿ ಮಾಡಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಆ ಉದ್ದೇಶವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ತುಮಕೂರಿಗೆ ಹೋಗ ಬೇಕಾದರೆ ಮಧ್ಯೆ ಅರಸೀಕೆರೆಯಲ್ಲಿ ಕುಡಿದುಹೋಗುವುದಕ್ಕೆ ಆಸ್ಪದವಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ Prohibition ಇದೆ. ಅಲ್ಲಿಂದ ಚಿತ್ರದುರ್ಗಕ್ಕೆ ಹೋಗಬೇಕಾದರೆ ಬೆಂಗಳೂರಿನಲ್ಲಿ ಕುಡಿದುಬಿಟ್ಟು ಚಿತ್ರದುರ್ಗಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆ?

ಶ್ರೀ ಬಿ. ಹುಚ್ಚೇಗೌಡ.—ಇದು ಒಂದೇ ಒಂದು ತಾಲ್ಲೂಕು; 12 ಮೈಲಿಗಳ ಸುತ್ತ ನಾಲ್ಕು ಡಿಸ್ಟ್ರಿಕ್ಟ್‌ಗಳ Prohibited area ಇದೆ. ಇದು ಒಂದು ತಾಲ್ಲೂಕಿನಲ್ಲೇ ಹೆಂಡದ ಅಂಗಡಿಗಳನ್ನು ಉಳಿಸಿಕೊಳ್ಳಬೇಕಾದರೆ ಏನು ಕಾರಣ? ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವುದಕ್ಕೆ ತುಮಕೂರು ಬಿಟ್ಟು ಹೋದರೆ ಮುಂದೆ Prohibited area ಇದೆ. ಆದ್ದರಿಂದ ಅದನ್ನು ಮುಚ್ಚುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಸದ್ಯಕ್ಕೆ ಮುಚ್ಚುವುದಕ್ಕೆ ಸಾಧ್ಯವಿಲ್ಲ. ಅದು ಒಂದು Policy matter; ನಿಧಾನವಾಗಿ ಯೋಚನೆ ಮಾಡಬೇಕಾಗುತ್ತದೆ. Constitution ಪ್ರಕಾರ gradual ಆಗಿ Prohibition ಜಾರಿಗೆ ತರಬೇಕು ಎನ್ನತಕ್ಕಂಥ ನಿಯಮ ಇದ್ದೇ ಇದೆ. ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎ. ತಿಮ್ಮಪ್ಪಗೌಡ.—ಹಾಸನ ಜಿಲ್ಲೆಯಲ್ಲಿ ಪಾನನಿರೋಧ ಇದೆ. ಅರಕಲಗೂಡು—ಬೇಲೂರು ತಾಲ್ಲೂಕುಗಳ ಪಕ್ಕದಲ್ಲಿ ಒಂದು ಫರ್ಲಾಂಗ್ distance ನಲ್ಲಿ, ಗೊರೂರುವಗೈರೆ ಸ್ಥಳಗಳಲ್ಲಿ ಸೇಂದಿ ಅಂಗಡಿಗಳನ್ನು ನಡೆಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—Excise ವಿಷಯದಲ್ಲಿ ಯಾವ ಯಾವ area ದಲ್ಲಿ ಅಂಗಡಿಗಳನ್ನು ಇಟ್ಟುಕೊಂಡು ನಡೆಸತಕ್ಕದ್ದು ಎಂಬುದನ್ನು ಮತ್ತು ಯಾವ ರೀತಿ ಅಂಗಡಿಗಳನ್ನು ನಡೆಸಬೇಕೆಂಬುದನ್ನು ಹರಾಜು ಇಸ್ತಿಹಾರ್ನಾಮೆಯಲ್ಲಿ ನಮೂದು ಮಾಡಿರುತ್ತಾರೆ.

ಶ್ರೀ ಬಿ. ಎ. ತಿಮ್ಮಪ್ಪಗೌಡ.—ಹೋದವರ್ಷ ಇಸ್ತಿಹಾರ್ನಾಮೆ ಹೊರಡಿಸುವುದಕ್ಕೆ ಮುಂಚೆ ಹಾಸನ ಜಿಲ್ಲೆಯಲ್ಲಿ Assembly ಸದಸ್ಯರು ಎಲ್ಲರೂ ಕೂಡ Border ನಲ್ಲಿರತಕ್ಕ ಅಂಗಡಿಗಳನ್ನು ತೆಗೆಯಬೇಕು ಎಂದು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಮನವಿಗಳನ್ನು ಕೊಟ್ಟನಂತರ ಕೆಲವು border shop ಗಳನ್ನು ತೆಗೆಯಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಎಲ್ಲೆಲ್ಲಿ ಹೆಚ್ಚಾಗಿ ಅಂಗಡಿಗಳನ್ನು ತೆಗೆಯಲಾಗಿದೆ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡ.—Five miles belt ಎಂದು ನಿಗದಿ ಏನಾದರೂ ಮಾಡೋಣವಾಗಿದೆಯೇ?

ಶ್ರೀ ಟಿ. ಚನ್ನಯ್ಯ.—Madras State Border belt area five miles distance ನಲ್ಲಿ ಯಾವ shop ನ್ನೂ ಇಡಕೂಡದೆಂದು ನಿಗದಿ ಮಾಡಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—Prohibition introduce ಮಾಡದೇ ಇರುವ area ಕ್ಕೂ Prohibited area ಕ್ಕೂ ಮಧ್ಯೆಯಿರುವ ಪ್ರದೇಶಕ್ಕೆ ಈ ರೂಲ್ ಅನ್ವಯಿಸುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೆಲವು ಸ್ಥಳಗಳಿಗೆ ಅನ್ವಯಿಸಿ ಇದೇ ರೀತಿ ಕೆಲವು shop ಗಳನ್ನು ತೆಗೆಯಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬೇಲೂರಿಗೂ ಹಾಸನಕ್ಕೂ ಒಂದು ಅಡಿಯೂ ವ್ಯತ್ಯಾಸವಿಲ್ಲ. ಆದ್ದರಿಂದ ಹಾಸನದಲ್ಲಿ ಒಂದು ಅಡಿ ಆಚೆಯಿರುವ ಅಂಗಡಿಗಳನ್ನು ತೆಗೆಯುವುದಕ್ಕೆ ಪ್ರಯತ್ನಪಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಒಂದು ಅಡಿ, ಎರಡು ಅಡಿ ವ್ಯತ್ಯಾಸದಿಂದ ಏನಾಗುತ್ತದೆ?

Mr. SPEAKER.—The Point is that these shops have been located within a distance of one foot or two feet from the border.

ಶ್ರೀ ಟಿ. ಚನ್ನಯ್ಯ.—ಒಂದು ಫರ್ಲಾಂಗ್, ಎರಡು ಫರ್ಲಾಂಗ್, ಮೂರು ಫರ್ಲಾಂಗ್ ದೂರದಲ್ಲಿರತಕ್ಕಂಥ ಕೆಲವು ಅಂಗಡಿಗಳನ್ನೂ ಕೂಡ ಶ್ರೀ ಬೋರಣ್ಣಗೌಡರು representation ಕೊಟ್ಟಮೇಲೆ ಮುಚ್ಚಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—9 ಅಂಗಡಿಗಳನ್ನು ತೆಗೆಯಬೇಕೆಂದು ಹೇಳಿದರೆ ಎರಡು ಅಂಗಡಿಗಳನ್ನು ತೆಗೆದು 7 ಅಂಗಡಿಗಳನ್ನು ಇರಿಸಿದ್ದೀರಿ.

ಶ್ರೀ ಟಿ. ಚನ್ನಯ್ಯ.—ಕೊಟ್ಟ ಅಂಗಡಿಗಳನ್ನೆಲ್ಲಾ ಮುಚ್ಚುವುದಕ್ಕೆ ಸಾಧ್ಯವಿಲ್ಲ, ಎಷ್ಟು ಅಂಗಡಿಗಳನ್ನು ಮುಚ್ಚುವುದಕ್ಕೆ ಸಾಧ್ಯವೋ ಅಷ್ಟು ಅಂಗಡಿಗಳನ್ನು ಮುಚ್ಚಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಎಷ್ಟು ಅಂಗಡಿಗಳು Prohibited area ದ ಒಳಗಡೆ ಸೇರುವುದಿಲ್ಲ?

ಶ್ರೀ ಟಿ. ಚನ್ನಯ್ಯ.—ಎಲ್ಲ ವಿಚಾರಗಳನ್ನೂ ಪರ್ಯಾಲೋಚಿಸಿ ಸಾಧ್ಯವಾದಷ್ಟು ಅಂಗಡಿಗಳನ್ನ ಮುಚ್ಚಲಾಗಿದೆ. ಇನ್ನೂ ಕೆಲವನ್ನು ಮುಚ್ಚಲು ಯಾರಿಂದಲಾದರೂ Representation ಬಂದಮೇಲೆ ಅದನ್ನು consider ಮಾಡುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಸಾರಿ ಹರಾಜು ಮಾಡುವುದರೊಳಗೆ representation ಬಂದರೆ ಅಂಗಡಿಗಳನ್ನು ಮುಚ್ಚುವುದಕ್ಕೆ ಭರವಸೆ ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಗಂಗಾನಾಯಕ್.—ಕಳ್ಳಬಟ್ಟಿ ಕೇಸುಗಳನ್ನು ಪೋಲೀಸಿನವರು ಹಿಡಿಯುವುದಕ್ಕೆ ಹೋಗುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಹಿಡಿಯುತ್ತಾರೆ. ಮಾಲು ಸಿಕ್ಕಿದರೆ ಅವರನ್ನು ಹಿಡಿದುಕೊಂಡು ಬರುತ್ತಾರೆ.

ಶ್ರೀ ಗಂಗಾನಾಯಕ್.—ಕಳ್ಳಬಟ್ಟಿ ಮಾಲು ಸಿಕ್ಕದಿದ್ದರೆ ಹೆಂಗಸರನ್ನೇ ಹಿಡಿದುಕೊಂಡು ಹೋಗುತ್ತಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

Mr. SPEAKER.—That question does not arise.

ಶ್ರೀ ಟಿ. ಚನ್ನಯ್ಯ.—ಶ್ರೀ ಗಂಗಾನಾಯಕರು ಹೇಳಿದ್ದನ್ನು ವಿಚಾರಮಾಡಲಾಗುತ್ತದೆ.

Minor Forests in Ramanagaram Sub-Division.

Q.—16. Sri S. KARIAPPA (Virupakshapura).—

(SRI S. KARIAPPA).

Will the Government be pleased to state :—

(*a*) the names of villages in Ramanagaram Sub-Division which have got minor forests (figures may please be furnished talukwar) ;

(*b*) the extent of minor forests in each for those villages (figures may please be furnished talukwar) ?

A.—DR. R. NAGAN GOWDA (Minister for Agriculture).—

(*a*) and (*b*) Please see the Statement annexed.

Statement of Minor Forests in Ramanagaram Sub-Division, Bangalore District.

Village			*Extent* A.	G.	
		1. *Magadi.*			
Athimgere	...	... ...	84	18	
Heligenahalli	...	Gomal ...	284	27	
Mathikere	...	Gomal part ...	115	13	
Maraldevanapura	...	,, ...	212	20	
Chakrabhavi	...	,, ...	342	20	
Mathikere	...	,, ...	47	20	
Korlamangala	...	,, ...	30	00	
Kalari	...	,, ...	472	10	
Kaval	...	Kharab part ...	298	30	
Lakkasandra	...	Gomal part ...	110	00	
Neralvadi	...	,, ...	165	00	
Kondahally	...	,, ...	150	00	
		Kharab ...	35	00	
Balekatte	...	,, ...	85	00	
Tubinakere	...	Gomal ...	175	00	
Sathanur	...	,, ...	55	00	
Managallu	...	,, ...	55	00	
Averahalli	...	Kharab part ...	92	01	'A' Block
		,, ...	170	00	'B' Block
Manchanbele	...	,, ...	200	00	,,
,,	...	,, ...	135	00	,,
,,	...	Gomal ...	29	37	,,
,,	...	,, ...	80	00	'C' Block
Kuduru	...	Gomal ...	118	06	
		Part ...	45	38	
Kuntangere	...	Gomal ...	78	00	
Mullikunte	...	,, ...	65	00	
Bhirapura	...	,, ...	71	00	
		2. *Ramanagaram.*			
Kunigallu	...	Gomal ...	340	00	
Arehally	...	Gomal part ...	18	00	
		,, ...	110	00	
Ibbalakahalli	...	,, ...	174	00	
Harisandra	...	Kharab part ...	48	00	
Jalamangala	...	Kharab ...	9	33	'A' Block
		Part ...	180	04	'B' Block
		Gomal ...	188	03	'C' Block
Doddasulikere	...	Gomal part ...	2	00	
		,, ...	185	00	
		Kharab ...	68	00	

Village				*Extent* A.	G.	
Ankanahalli	...	Gomal part	...	505	00	
		,,	...	100	00	
		,,	...	35	00	
Kutugal	...	,,	...	85	00	'A' Block
		,,	...	100	00	
		,,	...	85	00	
Shanbhoganahalli	...	,,	...	82	00	'B' Block
Hallimala	...	,,	...	272	00	'C' Block
		3. *Kanakapura*				
Tippur	...	Gomal part	...	165	00	
Bommasandra	...	Kharab	...	306	00	
		,,	...	168	00	
Bijhally	...	Gomal	...	200	00	
		,,	...	305	00	
Uyyambally	...	Gomal part	...	180	00	
Kunnur	...	Kharab part	...	224	00	
		Gomal	...	626	04	
Kebbehally	...	Kharab part	...	191	10	
		,,	...	60	00	
Kutugale	...	Gomal	...	109	11	
Maryadayakanagudi	...	Kharab	...	95	00	
		4. *Channapatna.*				
Komanahalli	...	Gomal part	...	144	00	
Rangur	...	,,	...	200	00	
Deverahosahally	...	Korab	...	75	00	
Gomal	..	,,	...	204	00	
Kelegere	...	...	...	16	00	

Sri S. KARIAPPA.—I have no supplementaries.

Agriculture and Animal Husbandry Departments (Implementation of Dr. Coleman's recommendation).

Q.—254. Sri S. R. NAGAPPA SETTY (Shimoga).—

Will the Government be pleased to state :—

the steps taken by them to implement the recommendations of Dr. L. C. Coleman regarding the departments of Agriculture and Animal Husbandry ?

A.—Dr. R. NAGAN GOWDA (Minister for Agriculture).—

The Heads of Departments concerned have been requested to implement the recommendations accepted by Government. They are under several stages of implementation.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ಶಿಫಾರಸು ಗಳಂತೆ ಯಾವಯಾವ ಇಲಾಖೆಗಳಲ್ಲಿ ಏನೇನು ಬದ ಲಾವಣೆಗಳಾಗಿವೆ ?

* ಡಾ॥ ಆರ್. ನಾಗನಗೌಡ.—Animal Husbandry ಇಲಾಖೆಯಲ್ಲಿ ಕೆಲವಾಗಿವೆ. Agricultural Department ನಲ್ಲಿ ಕೆಲವು changes ಆಗಿವೆ. ಇನ್ನೂ ಹಾಗೆಯೇ ಆಗುತ್ತಲೇ ಇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೂರು ಜನ ವ್ಯವಸಾಯದ ಅಸಿಸ್ಟೆಂಟ್ ಡೈರೆಕ್ಟರುಗಳು ಟ್ರೈನಿಂಗ್ ಇಲ್ಲದಿರುವವರು ಇದ್ದಾರೆ. ಬೇರೆಯವರು ಟ್ರೈನಿಂಗ್ ಆಗಿರುವವರನ್ನು ಹಾಕಿ ಎಂದು ಶಿಫಾರಸು ಮಾಡಿದ್ದಾರೆ. ಅದರಂತೆ ಟ್ರೈನಿಂಗ್ ಆಗಿರುವ ಅಸಿಸ್ಟೆಂಟ್ ಡೈರೆಕ್ಟರುಗಳನ್ನು post ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಇದರ ವಿಷಯವಾಗಿ ಡೈರೆಕ್ಟರವರು, 'ಹೀಗೆ ಮಾಡುವುದರಿಂದ ಬಹಳ ಕಷ್ಟ ವಾಗುತ್ತದೆ ; promotion ಮುಂತಾದುವುಗಳೆಲ್ಲಾ upset ಆಗುತ್ತವೆ, ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿ trained agricultural graduates ಗಳನ್ನು ನೇಮಕ ಮಾಡಿಲ್ಲ ವೆಂದು ಹೇಳಿದ್ದಾರೆ. ಅದನ್ನು ಜಾರಿಗೆ ತಂದಿದ್ದೀರಾ ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ proposals ಕಳುಹಿಸಿದ್ದಾರೆ ; ಯೋಚನೆಮಾಡುತ್ತೇನೆ.

---

* Asterisk indicates that the remarks or speeches have not been revised by the Member concerned.